## ಸುರತ್ಕಲ್‌ನ ಕೆಆರ್‌ಇಸಿ (ಎನ್ ಐಟಿಕೆ)

# 1965ರ ವಿದ್ಯಾರ್ಥಿಗಳ ತಂಡದ ವಜ್ರ ಮಹೋತ್ಸವ ಆಚರಣೆ



ಮಂಗಳೂರು, ಫೆ. 19: ಸುರತ್ಕಲ್‌ನ ಕರ್ನಾಟಕ ಪ್ರಾದೇಶಿಕ ಎಂಜಿನಿಯರಿಂಗ್ ಕಾಲೇಜು (ಈಗ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ, ಸುರತ್ಕಲ್) 1965ರ ಬಿಇ ಬ್ಯಾಚ್‌ನ ವಜ್ರ ಮಹೋತ್ಸವ ಮಂಗಳವಾರ ಸುರತ್ಕಲ್‌ನ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕದಲ್ಲಿ ನಡೆಯಿತು.

ಎನ್‌ಐಟಿಕೆ ನಿರ್ದೇಶಕ ಪ್ರೊ। ಬಿ. ರವಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಸ್ಥೆ ಮತ್ತು ಅದರ ಹಳೆಯ ವಿದ್ಯಾರ್ಥಿಗಳ ನಡುವಿನ ನಿರಂತರ ಬಂಧವನ್ನು ಒತ್ತಿ ಹೇಳಿದರು. ವಜ್ರ ಮಹೋತ್ಸವ ಆಚರಣೆಗಾಗಿ ಎನ್ ಐಟಿಕೆಯ ಹಳೆಯ ವಿದ್ಯಾರ್ಥಿಗಳನ್ನು ಸ್ವಾಗತಿಸಿದ ರೀತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಬೋಧಕರು ಮತ್ತು ಸಿಬಂದಿಯ ವಿಸ್ತರಣೆ, ಮೂಲಸೌಕರ್ಯ ನವೀಕರಣ, ಪಿಐಸಿಗಳ ನೇಮಕಾತಿ ಮತ್ತು ಸಮುದಾಯ ತೊಡಗಿಸಿಕೊಳ್ಳುವಿಕೆ ಉಪಕ್ರಮಗಳು ಸೇರಿದಂತೆ ಎನ್‌ಐಟಿಕೆಯಲ್ಲಿ ಇತ್ತೀಚಿನ ಪ್ರಗತಿಯ ಬಗ್ಗೆ ಉಲ್ಲೇಖಿಸಿದರು.

ವಿವಿಧ ಶೈಕ್ಷಣಿಕ ವಿಭಾಗಗಳ 18 ಹಳೆಯ ವಿದ್ಯಾರ್ಥಿಗಳ ಉಪಸ್ಥಿತಿ ಕಾರ್ಯಕ್ರಮಕ್ಕೆ ಮೆರುಗು ನೀಡಿತು. ಉದ್ಘಾಟನ ಸಮಾರಂಭದಲ್ಲಿ 1965ರ ಬಿಇ ಬ್ಯಾಚ್‌ನ ಹಳೆ ವಿದ್ಯಾರ್ಥಿ ಕೆ. ಎಂ. ನಿರ್ಮಲ್ ಕುಮಾರ್ ಭಾಗವಹಿಸಿದ್ದರು. 1965ರ ಅಧ್ಯಾಪಕರು ಮತ್ತು ಅಗಲಿದ ಬ್ಯಾಚ್‌ಮೇಟ್‌ಗಳಿಗೆ ಕೆ.ಎಂ. ನಿರ್ಮಲ್ ಕುಮಾರ್ ಶ್ರದ್ಧಾಂಜಲಿ ಅರ್ಪಿಸಿದರು. ಅಸೋಸಿಯೆಟ್ ಡೀನ್ ಡಾ। ಸೌಮ್ಯ ಕಾಮತ್ ಅವರು 'ನಾಸ್ಟಾಲ್ಜಿಕ್ ಮೊಮೆಂಟ್: ಕೆಆರ್‌ಇಸಿಯಿಂದ ಎನ್‌ಐಟಿಕೆಗೆ ಪ್ರಯಾಣ' ಎಂಬ ಶೀರ್ಷಿಕೆಯಡಿ ವೀಡಿಯೋ ಪ್ರಸ್ತುತಿ ನೀಡಿದರು.

ಈ ಸಂದರ್ಭದಲ್ಲಿ ಹಾಜರಿದ್ದ 1965ರ ಬ್ಯಾಚ್‌ನ ಹಳೆಯ ವಿದ್ಯಾರ್ಥಿಗಳಿಗೆ ಜೀವನಪರ್ಯಂತ ಮಾನ್ಯವಾದ ಎನ್‌ಐಟಿಕೆ ಹಳೆಯ ವಿದ್ಯಾರ್ಥಿಗಳ ಗುರುತಿನ ಚೀಟಿಗಳನ್ನು ವಿತರಿಸಲಾಯಿತು.

ಕೆಆರ್‌ಇಸಿಯ ಎನ್‌ಸಿಸಿ ಪ್ರವರ್ತಕ ಎನ್. ಆರ್. ಶೆಟ್ಟಿ ಅವರು 1965ರ ವಜ್ರಮಹೋತ್ಸವದ ಸ್ಮರಣಿಕೆಯನ್ನು ಬಿಡುಗಡೆ ಮಾಡಿದರು.

ಕೆಆರ್‌ಇಸಿಯ ಮಾಜಿ ಪ್ರಾಂಶುಪಾಲ, ಹಳೆಯ ವಿದ್ಯಾರ್ಥಿಗಳು ಮತ್ತು ಕಾರ್ಪೊರೆಟ್ ಸಂಬಂಧಗಳ ಡೀನ್ ಪ್ರೊ। ಶ್ರೀಕಂಠ ಎಸ್. ರಾವ್, 1970 ಹಳೆಯ ವಿದ್ಯಾರ್ಥಿ ಎ.ಎಸ್. ಕಾರಂತ ಮತ್ತು 1981 ಹಳೆಯ ವಿದ್ಯಾರ್ಥಿ ಆರ್. ಕೃಷ್ಣಮೂರ್ತಿ ಮತ್ತು ಎನ್‌ಐಟಿಕೆ ಹಳೆಯ ವಿದ್ಯಾರ್ಥಿಗಳ ಸಂಘದ ಬೆಂಗಳೂರು ಘಟಕದ ಅಧ್ಯಕ್ಷ ನಿರಂಜನ್ ಬಹಬಳ್ಳಪ್ಪ ಮತ್ತು ಎನ್‌ಐಟಿಕೆಯ ಗಣ್ಯರು, ಬೋಧಕರು, ಸಿಬಂದಿ ಉಪಸ್ಥಿತರಿದ್ದರು.

1965ರ ಬ್ಯಾಚ್‌ನ ಎಂ. ನರಸಿಂಗ ರೈ ವಂದನಾ ನಿರ್ಣಯದಲ್ಲಿ ಎನ್‌ಐಟಿಕೆಗೆ ಧನ್ಯವಾದ ಸಲ್ಲಿಸಿದರು.